ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಮಾತು ಕತೆ

## ಮೈಸೂರು

Volume 1 | Dec 2022

## ನಾಗವಾಲ ಗ್ರಾಮ ಪಂಚಾಯತ್

### ಅಧ್ಯಕ್ಷರ ಸಂದೇಶ (ಪ್ರಕಾಶಕರು)



ಗ್ರಾಮೀಣ ಬದುಕಿನ ನೈಜ ಅಗತ್ಯಗಳನ್ನು ಪರಿಗಣಿಸುವ ಮೂಲಕ ಗ್ರಾಮ ಪಂಚಾಯತ್‌ನಲ್ಲಿ ಸರ್ವಾಂಗೀಣ ಅಭಿವೃದ್ಧಿ ಮತ್ತು ಜನ ಸಾಮಾನ್ಯರ ಆಶೋತ್ತರಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ನಾಗವಾಲ ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿ ಶ್ರಮಿಸುತ್ತಿದೆ. ಗ್ರಾಮ ಪಂಚಾಯತ್ ಗಳು ಶಸನ ಸಭೆಗಳಾಗಬೇಕು, ಕಾರ್ಯಾಂಗವಾಗಬೇಕು, ನ್ಯಾಯಾಂಗವಾಗಬೇಕು ಎಂಬ ಗಾಂಧೀಜಿಯವರ ಆಶಯದಂತೆ ಗ್ರಾಮ ಪಂಚಾಯತ್ ಕಾರ್ಯ ನಿರ್ವಹಿಸುತ್ತಿದೆ.

### ಪಿ.ಡಿ.ಓ. ರವರ ಸಂದೇಶ (ಸಂಪಾದಕರು)



ನಾಗವಾಲ ಗ್ರಾಮ ಪಂಚಾಯತ್ ಆಡಳಿತ ಮಂಡಳಿಯು ಮುಂದಿನ ಐದು ವರ್ಷಗಳಲ್ಲಿ ಆಗಬೇಕಾದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ದೀರ್ಘವಾಗಿ ಬಾಳಿಕೆ ಬರುವ ಆಸ್ತಿಗಳ ಸೃಜನೆ, ಕೃಷಿ, ಆರೋಗ್ಯ, ಶಿಕ್ಷಣಗಳ ಕುರಿತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಗ್ರಾಮ ಪಂಚಾಯಿತಿಯು ಪ್ರಗತಿ ಪಥದಲ್ಲಿ ಸಾಗುತ್ತಿದ್ದು, ಗ್ರಾಮೀಣ ಜನ ಜೀವನವನ್ನು ಬಲ ಪಡಿಸುತ್ತಾ ಪಾರದರ್ಶಕ ಆಡಳಿತ ನೀಡಲು ಶ್ರಮಿಸುತ್ತಿದ್ದೇವೆ

### ಮುಖ್ಯ ಕಾರ್ಯನಿರ್ವಹಣಾಧಿಕಾರಿರವರ ಸಂದೇಶ



ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯಗತ ಮಾಡಿರುವ ರಚನಾತ್ಮಕ ಕೆಲಸಗಳನ್ನು ಜನರ ಜೊತೆ ಮಾತುಕತೆಯ ಮೂಲಕ ಹಂಚಿಕೊಂಡು ಧನಾತ್ಮಕ ಬದಲಾವಣೆಗೆ ಕಾರಣವಾಗಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶಯವಾಗಿದೆ. ನಾಗವಾಲ ಗ್ರಾಮ ಪಂಚಾಯಿತಿಯ ಉತ್ತಮ ಕಾರ್ಯಗಳು, ಜನ ಪ್ರತಿನಿಧಿಗಳ ಹಾಗೂ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ಸಮೂಹವಾಗಿ ಕಾರ್ಯನಿರ್ವಹಿಸುವ ಪರಿ ಇನ್ನಿತರರಿಗೆ ಪ್ರೇರಣೆಯಾಗಲಿ ಎಂದು ತಿಳಿಸುತ್ತಾ, **'ಮಾತು ಕಥೆ'** ಮಾಸ ಪತ್ರಿಕೆಯ ಪ್ರಥಮ ಸಂಚಿಕೆಗೆ ಶುಭ ಹಾರೈಸುತ್ತೇನೆ.

### ಶಾಲೆಗಳಲ್ಲಿ ಸೋಲಾರ್ 'ಸ್ಮಾರ್ಟ್' ಕ್ಲಾಸ್‌ಗಳು



ಗ್ರಾಮೀಣ ಪ್ರದೇಶದ ಮಕ್ಕಳು ಉತ್ತಮ ಗುಣಮಟ್ಟದ ಹಾಗೂ ವಿಭಿನ್ನ ಕಲಿಕೆಯ ಶಿಕ್ಷಣ ನಮ್ಮ ಮಕ್ಕಳಿಗೂ ದೊರೆಯಬೇಕು ಅನ್ನುವ ನಿಟ್ಟಿನಲ್ಲಿ ನಾಗವಾಲ ಗ್ರಾಮ ಪಂಚಾಯಿತಿಯೂ ತನ್ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಸೋಲಾರ್ ಸ್ಮಾರ್ಟ್ ಕ್ಲಾಸ್‌ಗಳ ಸೌಲಭ್ಯ ಕಲ್ಪಿಸಿದೆ. ಇವು ಸಂಪೂರ್ಣವಾಗಿ ಸೌರ ಶಕ್ತಿಯನ್ನು ಬಳಸಿಕೊಂಡು ಕಾರ್ಯ ನಿರ್ವಹಿಸುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸೌಲಭ್ಯ ಸಮರ್ಪಕವಾಗಿಲ್ಲದ ಕಾರಣ ತರಗತಿಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನಿರಂತರವಾಗಿ ಬಳಸಿಕೊಳ್ಳಲು ಈ ಸ್ಮಾರ್ಟ್ ಕ್ಲಾಸ್‌ಗಳು ಸಹಾಯಕವಾಗಿವೆ. ಒಂದು ಸ್ಮಾರ್ಟ್ ಕ್ಲಾಸ್‌ಗೆ ರೂ. 1,51,000 ತಗುಲಿದ್ದು ಇದನ್ನು ಒಗ್ಗೂಡಿಸುವಿಕೆಯಡಿಯಲ್ಲಿ ಸೆಲ್ಕೋ ಸೋಲಾರ್ ಕಂಪನಿ ಜೊತೆಗೂಡಿ ಅನುಷ್ಟಾನಗೊಳಿಸಲಾಗಿದೆ. ಸೆಲ್ಕೋ ಸೋಲಾರ್ ಕಂಪನಿಯು ರೂ 53.000=00 ಗಳನ್ನು ಭರಿಸಿದ್ದು ಉಳಿದಂತೆ ನಾಗವಾಲ ಗ್ರಾಮ ಪಂಚಾಯಿತಿಯು ತನ್ನ ಸ್ವಂತ ಸಂಪನ್ಮೂಲದ ಉಳಿಕೆ ಹಣವನ್ನು ಭರಿಸಿದೆ. 100 ವ್ಯಾಟೇಜಿನ ಎರಡು ಸೋಲಾರ್ ಪ್ಯಾನೆಲಿನ ನೆರವಿನಿಂದ ಕಾರ್ಯ ನಿರ್ವಹಿಸುವ ಸ್ಮಾರ್ಟ್ ಕ್ಲಾಸ್ 60 ವ್ಯಾಟೇಜಿನ ಒಂದು ಸೋಲಾರ್ ದೀಪವನ್ನು ಆವರಣದಲ್ಲಿ ಹೊಂದಿದೆ.

**ಸುಲಭ ಕಲಿಕೆಯತ್ತ ನಮ್ಮ ಮಕ್ಕಳು:** ತರಗತಿಯಲ್ಲಿ 56 ಇಂಚಿನ ಎಲ್.ಇ.ಡಿ ಸ್ಕ್ರೀನ್ ಅಳಡಿಸಲಾಗಿದೆ. ಇದರಲ್ಲಿ 1 ರಿಂದ 10 ನೇ ತರಗತಿವರೆಗಿನ ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಸೇರಿದಂತೆ ಎಲ್ಲಾ ವಿಷಯಗಳ ರಾಜ್ಯ ಮತ್ತು ಕೇಂದ್ರದ ಪಠ್ಯವನ್ನು ವಿಡಿಯೋ ಮತ್ತು ಪಿ.ಪಿ.ಟಿ ರೂಪದಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ವಿದ್ಯಾರ್ಥಿಗಳು ಸ್ವತ: ತಮಗೇ ಬೇಕಾದ ವಿಷಯಗಳನ್ನು ಆರಿಸಿಕೊಂಡು ನೋಡಿ, ಕೇಳಿ ಕಲಿಯಬಹುದಾಗಿರುತ್ತದೆ. ಸ್ಮಾರ್ಟ್ ಕ್ಲಾಸ್ ನಿರ್ವಹಣೆ ಕರಿತಂತೆ ಶಿಕ್ಷಕರಿಗೂ ತರಬೇತಿಯಾಗಿದ್ದು, ಸರಳ ಮತ್ತು ಸುಲಲಿತ ಶಿಕ್ಷಣಕ್ಕೆ ಸ್ಮಾರ್ಟ್ ಕ್ಲಾಸ್‌ಗಳು ಮಾದರಿಯಾಗಿವೆ.

### ಸರ್ಕಾರಿ ಹುದ್ದೆಗಳ ಅಧಿಸೂಚನೆ

- ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಆಹ್ವಾನ
  https://cetonline.karnataka.gov.in/kea/
- ಕಾಲೇಜು
  fasdff

### ಮುಚ್ಚಿದ್ದ ಕೀರ್ತಿ ಶೇಷ ಕಲ್ಯಾಣಿಗೆ ನರೇಗಾದಿಂದ ಜೀವ



ಸುಮಾರು ನಾಲ್ಕು ನೂರು ವರ್ಷಗಳ ಹಳೆಯ ಕಲ್ಯಾಣಿ ನಾಗವಾಲ ಹಿರಿಯರ ಮನದಲ್ಲಿ ನೆನಪಾಗಿ ಉಳಿದಿತ್ತು. ಕಲ್ಯಾಣಿಯೊಂದಿತ್ತು ಅನ್ನುವ ಸಣ್ಣ ಕುರುಹು ಇಲ್ಲದ ಹಾಗೇ ಮುಚ್ಚಿ ಹೋಗಿತ್ತು. ಊರಿನ ಹಿರಿಯರ ಭಾವನಾತ್ಮಕ ಸಂಗತಿಯಾಗಿದ್ದ ಕಲ್ಯಾಣಿಗೆ ಹೊಸ ರೂಪ ಕೊಡಲು ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ನಿರ್ಧರಿಸಿತು. ತಡ ಮಾಡದೇ ರೂ. 15 ಲಕ್ಷ ಮೊತ್ತಕ್ಕೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆದು ಕೆಲಸ ಪ್ರಾರಂಭಿಸಲಾಯಿತು. ಒತ್ತುವರಿ ತೆರವುಗೊಳಿಸಿ ಫೀಡರ್‌ಚಾನಲ್‌ಗಳನ್ನು ಸ್ವಚ್ಛಗೊಳಿಸಲಾಯಿತು. ಕೆಲಸ ಮುಗಿಯುವ ಹೊತ್ತಿಗೆ ಮಳೆಯೂ ಪ್ರಾರಂಭವಾಗಿ ಫೀಡರ್‌ಚಾನಲ್‌ಗಳಿಂದ ನೀರು ಸರಾಗವಾಗಿ ಹರಿದು ಕಲ್ಯಾಣಿ ತುಂಬ ತೊಡಗಿತು.

ಸದ್ಯ ಕಲ್ಯಾಣಿಯ ತಟದಲ್ಲೇ ಬಡವರಿಗಾಗಿ ಆಶ್ರಯ ಬಡವಾಣೆ ಇದೆ, ಜನರಿಗೆ ಹೆಚ್ಚು ಉಪಯೋಗವಾಗುವ ನಿಟ್ಟಿನಲ್ಲಿ ಉದ್ಯಾನವನವನ್ನೂ ನಿರ್ಮಿಸಲಾಗಿದೆ. ಊರಿನ ಜನರೇ ಶ್ರಮವಹಿಸಿ ಅಲ್ಲೊಂದು ಪುಟ್ಟ ದೇವಾಲಯವನ್ನು ನಿರ್ಮಿಸಿಕೊಂಡಿದ್ದು ಅಲ್ಲೊಂದು ಸಾಂಸ್ಕೃತಿಕ ಕಲಾಗ್ರಾಮ ಸೃಷ್ಟಿಯಾಗಿದೆ.

### ಸಾಂಪ್ರದಾಯಿಕ ನೀರಿನ ಮೂಲಗಳ ಸಂರಕ್ಷಣೆ



ಜಲ ಶಕ್ತಿ ಅಭಿಯಾನ ಯೋಜನೆಯಡಿ ನೀರಿನ ಸಂರಕ್ಷಣೆ, ಸಾಂಪ್ರದಾಯಿಕ ಮತ್ತು ಇತರೆ ಜಲಮೂಲಗಳ ನವೀಕರಣ, ನೀರಿನ ಮರುಬಳಕೆ ಮತ್ತು ರಚನೆಗಳ ಮರುಪೂರಣ, ಜಲಾನಯನ ಅಭಿವೃದ್ದಿಗೆ ಒತ್ತು ಕೊಟ್ಟು ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವುದರ ಜೊತೆಗೆ ನೀರಿನ ಮೂಲಗಳ ಸಂರಕ್ಷಣೆ ಜವಬ್ದಾರಿಯನ್ನು ಸಮುದಾಯಕ್ಕೆ ನೀಡಲಾಗಿದೆ. ನೀರಿನ ಮಹತ್ವ ಮ್ತು ಬಳಕೆಯ ಕುರಿತಂತೆ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

### ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ **'ಓದುವ ಬೆಳಕು'** ಕಾರ್ಯಕ್ರಮದಡಿ ನಾಗವಾಲ ಗ್ರಾಮ ಪಂಚಾಯಿತಿಯು ಸುಸಜ್ಜಿತ ಗ್ರಾಮೀಣ ಗ್ರಂಥಾಲಯವನ್ನು 14 ನೇ ಹಣಕಾಸು ಯೋಜನೆಯ ಬಡ್ಡಿ ಹಣವನ್ನು (ರೂ 4,50,000/–) ಹಾಗೂ ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲ ಹಣವನ್ನು ಬಳಸಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕಣಿಕ ಪ್ರಗತಿಗೆ ಪೂರಕವಾಗಿ ಹಳ್ಳಿಯ ವಿದ್ಯಾವಂತ ಯುವ ಸಮುದಾಯಕ್ಕೆ ಓದುವ ಮತ್ತು ಸರ್ಕಾರಿ ನೌಕರಿ ಗಿಟ್ಟಿಸುವ ಅವರ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಉತ್ತಮ ಗುಣಮಟ್ಟದ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳು, ಇಂಟರ್ ನೆಟ್ ಸೌಲಭ್ಯ ಮತ್ತು ಪ್ರಿಂಟರ್ ವ್ಯವಸ್ಥೆ ಮಾಡಿ ಕೊಡಲಾಗಿದೆ.

### ಸ್ವಚ್ಛತೆಯೆಡೆಗೆ ನಮ್ಮ ಗ್ರಾಮಗಳು



ಸ್ವಚ್ಛತೆಯ ಅರಿವು ಮೂಡಿಸುವುದು ಮತ್ತು ಮನೆಯ ಹಂತದಲ್ಲೇ ಕಸ ಬೇರ್ಪಡಿಸಿ ಗ್ರಾಮ ಪಂಚಾಯಿತಿ ಕಸ ಸಂಗ್ರಹಿಸುವ ವಾಹನಕ್ಕೆ ನೀಡಲು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐದು ಹಳ್ಳಿಗಳ ಪ್ರತೀ ಕುಟುಂಬಕ್ಕೂ ಕಸ ಸಂಗ್ರಹಣೆ ಬುಟ್ಟಿಯನ್ನು ನೀಡಲಾಗಿದೆ.



### ನರೇಗಾ ಕಾಮಗಾರಿಗಳಲ್ಲಿ ಮಹಿಳೆಯರು

ಮಹಿಳಾ ಕಾರ್ಮಿಕರನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಾಗವಾಲ ಗ್ರಾಮ ಪಂಚಾಯಿತಿಯು ಮಹಿಳಾ ಕಾಯೋಕೋತ್ಸವ ಹಮ್ಮಿಕೊಂಡು ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜಾಬ್ ಕಾಡ್ ವಿತರಿಸಲಾಗಿದೆ. ಮಹಿಳಾ ಕಾಯಕ ಬಂಧುಗಳನ್ನು ನೇಮಿಸಲಾಗಿದೆ. ನರೇಗಾ ಯೋಜನೆಯಿಂದಾಗಿ ನಮ್ಮ ಮಹಿಳೆಯರು ಸ್ವಾವಲಂಬಿಗಳಾಗುವ ಜೊತೆಗೆ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ.

### ಹೊಸ ಬದುಕಿನತ್ತ ನಮ್ಮ ಮಹಿಳೆಯರು



ಹೊಲಿಗೆ ತರಬೇತಿಯೆಂದರೆ ಸಿದ್ದ ಉಡುಪುಗಳನ್ನು ತಯಾರಿಸುವುದು ಎಂಬ ಸಾಂಪ್ರಾದಾಯಿಕ ಗ್ರಹಿಕೆಯನ್ನು ಹಿಮ್ಮೆಟ್ಟಿಸಿ ನಾಗವಾಲ ಗ್ರಾಮ ಪಂಚಾಯಿತಿಯ 60 ಮಹಿಳೆಯರು ವಿನೂತನ ತರಬೇತಿಗೆ ಸಾಕ್ಷಿಯಾದರು. ಗ್ರಾಮ ಪಂಚಾಯಿತಿಯು ಬೆಳಕು ಸಾಮಾಜಿಕ ಟ್ರಸ್ಟ್ ವತಿಯ ಸಹಯೋಗದೊಂದಿಗೆ ಸರಿ ಸುಮಾರು ಮೂರು ತಿಂಗಳ ಕಾಲ ಗ್ರಾಮದ ಮಹಿಳೆಯರಿಗೆ ವಿವಿಧ ರೀತಿಯ ವಸ್ತುಗಳ ತಯಾರಿಕೆಯನ್ನು ಮತ್ತು ಅದರ ಮಾರುಕಟ್ಟೆಯ ಕುರಿತು ಅರಿವನ್ನೂ ತಿಳಿಸಿದರು.

### ಶಾಲೆಗಳಲ್ಲಿ ಪೋಷಣ್ ಅಭಿಯಾನ್ ಕಾರ್ಯಕ್ರಮ




ಮಕ್ಕಳು, ಹದಿಹರೆಯದವರು, ಗರ್ಭಿಣಿಯರು ಮತ್ತು ಹಾಲೂಣಿಸುವ ತಾಯಂದಿರಲ್ಲಿ ಪೌಷ್ಟಿಕತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು 2018 ರಲ್ಲಿ ಜಾರಿಗೆ ತಂದಿದ್ದು ಅಂದಿನಿಂದ ಶಾಲೆಗಳಲ್ಲಿ ಮಕ್ಕಳಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವ ಮೂಲಕ ಪೋಷಣ್ ಅಭಿಯಾನ್ ಕಾರ್ಯಕ್ರಮ ಚಾಲನೆಯಲ್ಲಿದೆ. ಪೌಷ್ಟಿಕಾಂಶಭರಿತ ಆಹಾರಗಳು, ರಕ್ತ ಹೀನತೆ ತಡೆಗಟ್ಟುವುಕೆ, ಅತಿಸಾರ ನಿಯಂತ್ರಣ ಈ ವಿಷಯಗಳ ಕುರಿತು ವಿಷಯ ತಜ್ಞರಿಂದ ಮಾಹಿತಿ ನೀಡಲಾಗುತ್ತಿದೆ.



### ಏಕ ಬಳಕೆ ಪ್ಲಾಸ್ಟಿಕ್ ನಿಷೇಧ

ಗ್ರಾಮ ಪಂಚಾಯಿತಿಯು ಸರಿಸುಮಾರು 9000 ಜನಸಂಖ್ಯೆಯನ್ನು ಹೊಂದಿದ್ದು, ಪ್ರತೀ ಗ್ರಾಮದಲ್ಲಿಯೂ ಅಂಗಡಿಗಳು, ಸಣ್ಣ ಹೋಟೇಲ್‌ಗಳು, ಬೇಕರಿಗಳಿದ್ದು ಏಕ ಬಳಕೆಯ ಪ್ಲಾಸ್ಟಿಕ್ ಯಥೇಚ್ಛ ಬಳಕೆಯಲ್ಲಿತ್ತು, ಚರಂಡಿಗಳಲ್ಲಿ, ಬೀದಿಗಳಲ್ಲಿ, ರಸ್ತೆಗಳಲ್ಲಿ ಬಿಸಾಡಿದ ಪ್ಲಾಸ್ಟಿಕ್ ಗಳು ಸರ್ವೆ ಸಾಮಾನ್ಯವಾಗಿತ್ತು. ಏಕ ಬಳಕೆ ಪ್ಲಾಸ್ಟಿಕ್ ಬಳಕೆಯ ದುಷ್ಪಾರಿಣಾಮಗಳನ್ನು ಕಂಡುಕೊಂಡ ಗ್ರಾಮ ಪಂಚಾಯಿತಿಯು ಜನರಲ್ಲಿ ಈ ನಿಟ್ಟಿನಲ್ಲಿ ಅರಿವು ಮೂಡಿಸುವುದರೊಂದಿಗೆ ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಿ ಆದೇಶ ಹೊರಡಿಸಿದೆ.